ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 17 ನೇ ಮಾರ್ಚ್, 2020

ವಿಜಯನಗರ ಕ್ಲಬ್‌ನ ಆಡಳಿತ ಮಂಡಳಿ ಮತ್ತು ಗೌರವ ಸದಸ್ಯರ ಬಗ್ಗೆ

ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-

1099 (1241) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರಿನ ವಿಜಯನಗರ ಕ್ಲಬ್ ಯಾವ ಕಾಯ್ದೆಯಡಿ ನೋಂದಣಿಯಾಗಿದೆ ; ಕ್ಲಬ್‌ನ ಬೈಲಾ ಪ್ರತಿ ನೀಡುವುದು ;

(ಆ) ಸದರಿ ಕ್ಲಬ್‌ನಲ್ಲಿ ಇರುವ ಒಟ್ಟು ಸದಸ್ಯರ ಸಂಖ್ಯೆ ಎಷ್ಟು ;

(ಇ) ಕ್ಲಬ್‌ನಲ್ಲಿ 2010ರಿಂದ ಈವರೆಗೂ ಆಯ್ಕೆಯಾಗಿರುವ ಕಾರ್ಯಕಾರಿ ಸಮಿತಿ ಸದಸ್ಯರ ಹೆಸರು ಮತ್ತು ಕಾರ್ಯನಿರ್ವಹಿಸಿದ ಹುದ್ದೆಗಳ ವಿವರ ನೀಡುವುದು ;

(ಈ) ಸದರಿ ಕ್ಲಬ್‌ನಲ್ಲಿ ಗೌರವ ಸದಸ್ಯರನ್ನು (Honarary Member) ನೇಮಕ ಮಾಡಿಕೊಳ್ಳಲು ಇರುವ ನೀತಿ ನಿಯಮ ಮತ್ತು ಕ್ಲಬ್‌ನ ಬೈಲಾದನ್ವಯ ನಿಗದಿಪಡಿಸಿರುವ ಮಾನದಂಡ ಅಥವಾ ಷರತ್ತುಗಳೇನು ; (ವಿವರ ನೀಡುವುದು)

(ಉ) ಕ್ಲಬ್‌ನಲ್ಲಿ 2010ರಿಂದ ಈವರೆಗೂ ಎಷ್ಟು ಜನರಿಗೆ ಗೌರವ ಸದಸ್ಯತ್ವ ನೀಡಲಾಗಿದೆ ; ಹೆಸರು ಮತ್ತು ವಿಳಾಸವಾರು, ಸರ್ಕಾರಿ ಅಧಿಕಾರಿ/ನೌಕರರಾಗಿದ್ದರೆ ಹುದ್ದೆವಾರು ವಿವರ ನೀಡುವುದು ?